ಸಮುದ್ರ ಮಥನ




**ಮಾಹಿತಿಪೂರ್ಣ**

‘ಈಜಿನಿಂದ ಆರೋಗ್ಯ’, ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ (ಡಿ. 1) ತುಂಬ ಚೆನ್ನಾಗಿದೆ. ಇಷ್ಟೊಂದು ಮಾಹಿತಿಯನ್ನು ಒಂದೇ ಲೇಖನದಲ್ಲಿ ನಾವು ಇದುವರೆಗೆ ಓದಿರಲೇ ಇಲ್ಲ. ಈಜಿಗೆ ಬಹುದೊಡ್ಡ ಇತಿಹಾಸ, ಭವ್ಯ ಭವಿಷ್ಯ ಇದೆ ಎಂಬ ಲೇಖಕರ ಮಾತುಗಳನ್ನು ಒಪ್ಪಿಕೊಳ್ಳಲೇ ಬೇಕು.

—ಕೃಷ್ಣಜೋಶಿ ಧಾರವಾಡ, ಪಿ.ಗೋವಿಂದರಾಜ್ ಶಿವಮೊಗ್ಗ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಮಹಾವೀರ ಕಾಸರ ಶಿವಮೊಗ್ಗ, ಎಚ್.ಎಸ್. ರಾಘವೇಂದ್ರ ಬೆಂಗಳೂರು

**ಗುಟ್ಟು!**

‘ಈಜಿನಿಂದ ಆರೋಗ್ಯ..’ ಸುಮ್ಮನೆ ಹೇಳಿದರೇ ದಾಸರು, ‘ಈಸಬೇಕು ಇದ್ದು ಜೈಸಬೇಕು’ ಎಂದು! ಈಜು ಆರೋಗ್ಯದ ಮಾತ್ರವಲ್ಲ, ಜಯದ ಗುಟ್ಟು!

—ಸಿ.ಪಿ.ಕೆ. ಮೈಸೂರು

**ಸಮಯೋಚಿತ**

‘ನಿಮ್ಮೊಡನೆ’ಯಲ್ಲಿ ‘ಉತ್ತರವಿಲ್ಲದ ಪ್ರಶ್ನೆಗಳು’ (ಬಿ.ಎಂ. ಹನೀಫ್) ಬರಹ ಸಮಯೋಚಿತ.

—ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ

**ಕಾಶ್ಮೀರಕ್ಕೆ ಹೋಗುವಾಸೆ**

‘ಕಾಶ್ಮೀರದ ಖುಷಿಯ ತೋಟ’ (ಡಾ.ಕೆ.ಎಸ್. ಚೈತ್ರಾ) ಪ್ರವಾಸ ಲೇಖನ ಓದಿ ನಾವು 1987ರಲ್ಲಿ ಕಾಶ್ಮೀರಕ್ಕೆ ನೀಡಿದ ಭೇಟಿಯ ನೆನಪು ಮರುಕಳಿಸಿತು. ಅಲ್ಲಿಯ ದಲ್‌ಲೇಕ್, ಫ್ಲೋಟಿಂಗ್ ಮಾರ್ಕೆಟ್, ಬೋಟ್ ಹೌಸ್ ಎಲ್ಲವೂ ಸುಂದರ. ಲೇಖನ ಓದಿ ಇನ್ನೊಮ್ಮೆ ಕಾಶ್ಮೀರಕ್ಕೆ ಹೋಗುವ ಆಸೆ ಮೂಡಿದೆ.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು

**ಅಜ್ಜಿ ಮಾದರಿ**

‘ತರಕಾರಿ ಕೃಷಿ, ಈ ಅಜ್ಜಿ ಮಾದರಿ!’ (ಆಶಾ ಕೆರೆಗದ್ದೆ) ಲೇಖನ ಖುಷಿ ತಂದಿತು. ಕೃಷಿಯ ಬಗ್ಗೆ ನಿರಾಸಕ್ತಿ ತಾಳುವ ಸಮುದಾಯದವರಿಗೆ ಈ ಅಜ್ಜಿ ಮಾದರಿಯಾಗಿದ್ದಾರೆ.

—ರವೀಂದ್ರನಾಥ ಶಿ.ಯಡಹಳ್ಳಿ, ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ

**ವಿಚಾರ ಮಂಥನ**

‘ಬರಗೂರರ ಸಂದರ್ಶನ’ (ಅಲೇಖ) ಉತ್ತಮ ವಿಚಾರಗಳ ಮಂಥನದಿಂದ ಕೂಡಿದೆ. ಬರಗೂರರ ಸ್ವಚ್ಛ ಮನಸ್ಸು ಚಿಂತನೆಯನ್ನು ಒರೆಗೆ ಹಚ್ಚುವಂತಿದೆ.

—ಸುಂದರ್ ಬೆಂಗಳೂರು

**ಸಮಾಧಾನವಾಯಿತು**

ಆರೋಗ್ಯ ಲೇಖನ ‘ಡೆಂಗಿ ಪ್ರಾಣಾಂತಿಕವಲ್ಲ’ (ಡಾ.ಡಿ.ಕೆ. ಮಹಾಬಲರಾಜು) ಓದಿ ಸಮಾಧಾನವಾಯಿತು. ಸ್ವಚ್ಛತೆಗೆ ಆದ್ಯತೆ ನೀಡಿ ಆರಂಭದಲ್ಲೇ ಸೂಕ್ತ ಚಿಕಿತ್ಸೆ ಪಡೆದರೆ ಡೆಂಗಿ ಅಪಾಯದಿಂದ ಪಾರಾಗಬಹುದು. ಪಪ್ಪಾಯಿ ಎಲೆಗಳ ಮಹತ್ವದ ಬಗ್ಗೆ ಸ್ವಲ್ಪ ತಿಳಿಸಬಹುದಿತ್ತು.

—ಗಾಣಧಾಳು ರಾಮಣ್ಣ ಚಿತ್ರದುರ್ಗ, ನಾರಾಯಣಯಾಜಿ ಶಿರಾಲಿ, ಎಚ್.ಆನಂದಕುಮಾರ್ ಚಿತ್ರದುರ್ಗ

**ಕಥೆ ಚೆನ್ನಾಗಿದೆ**

‘ಸರ್ವದಮನ’ ಕಥೆ (ಉಷಾ ನರಸಿಂಹನ್) ಚೆನ್ನಾಗಿದೆ. ಕಥೆಗೆ ಪೂರಕವಾದ ಮೋನಪ್ಪ ಅವರ ಚಿತ್ರ ಸೊಗಸಾಗಿದೆ. ಕಾಳಿದಾಸನ ಮಹಾಕಾವ್ಯದ ಶಕುಂತಲೆಯನ್ನು ಕಣ್ಮುಂದೆ ತಂದಿತು.

—ಕೊಹಿಮ ಬಸರಕೋಡು

**ಹೆಮ್ಮೆ ಎನಿಸಿತು**

‘ಟಿಪ್ಪು ಹುಲಿ ಎಂಬ ರೂಪಕ’ ಕಥೆ’ (ಜೆ. ಬಾಲಕೃಷ್ಣ) ಲೇಖನ ಓದುತ್ತಿದ್ದಂತೆ ಟಿಪ್ಪುವಿನ ಅಗಾಧ ಕಲಾಭಿರುಚಿಯ ಬಗ್ಗೆ ಹೆಮ್ಮೆ ಮೂಡಿತು.

—ಮುಕುಂದ ಹೆರಕಲ್ಲ ಕಲಬುರಗಿ

**ಪತಿಯ ಕರ್ತವ್ಯ ಅಲ್ಲವೇ?**

‘ಮನೆಗೆಲಸ; ಬೇಡ ಆಲಸ್ಯ’ (ನಾಗೇಶ ಯು. ಸಿದ್ದೇಶ್ವರ) ಲೇಖನದಲ್ಲಿ ವಿವೇಚನೆ ಇದೆ. ಮನೆಗೆಲಸದಲ್ಲಿ ಪಾಲ್ಗೊಳ್ಳಲು ನಿವೃತ್ತಿಯಾಗಬೇಕೆಂದಿಲ್ಲ. ಮನೆಗೆಲಸದಲ್ಲಿ ಪತ್ನಿಗೆ ನೆರವಾಗುವುದು ಪತಿಯ ಕರ್ತವ್ಯ ಅಲ್ಲವೇ?

—ರತ್ನಾಕರ ಹೆಗಡೆಕಟ್ಟೆ ಮೂಡಬಿದ್ರಿ

**ಪಿಂಗಾಣಿ ಪುಷ್ಪ**

‘ಪಿಂಗಾಣಿ ಪುಷ್ಪ’ (ಮಂಜುನಾಥ ಡಿ.ಎಸ್.) ಲೇಖನದ ಹೋಯ್ ಕಾರ್ನೋಸ ವೈಜ್ಞಾನಿಕವಾಗಿ ಆಸ್ಲಿಪಿಯಡೇಶಿ ಕುಟುಂಬಕ್ಕೆ ಸೇರಿದ್ದಾಗಿದೆ. ಲೇಖಕರು ತಿಳಿಸಿದಂತೆ ಅದು ಎಪೊಸೈನೇಸಿ ಕುಟುಂಬಕ್ಕೆ ಸೇರಿದ್ದಲ್ಲ.

—ಪ್ರೊ.ಕೆ. ಗಾಯತ್ರಿ ಮೈಸೂರು


